ಸಿ ಸಿ ನಂ. 1251/20

ಪಿ.ಡಬ್ಲೂಃ 01

ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 30-08-2023

ಮುಂದುವರೆದ ಪಾಟಿ ಸವಾಲುಃ ಶ್ರೀ. ಎಂ ಎಚ್ ಕೊಲಕ್ಕಾರ ವಕೀಲರಿಂದ.

ನನಗೆ ಮೂರು ಜನ ಮಕ್ಕಳು ಇರುತ್ತಾರೆ. ಒಬ್ಬರು ಪಧವಿ ವ್ಯಾಸಂಗ, ಇನ್ನೊಬ್ಬರು ಡಿಪ್ಲೋಮಾ, ಮತ್ತೊಬ್ಬರು 9 ನೇ ತರಗತಿ ಓದುತ್ತಾರೆ. ನನ್ನ ಪತ್ನಿಯು ಮನೆಗೆಲಸ ಮಾಡಿಕೊಂಡು ಇರುತ್ತಾರೆ. ನಮ್ಮ ಮನೆಯನ್ನು ನಡೆಸಲು ಮತ್ತು ಮಕ್ಕಳ ವಿಧ್ಯಾಭ್ಯಾಸದ ಸಲುವಾಗಿ ಪ್ರತಿ ತಿಂಗಳು 15 ರಿಂದ 20 ಸಾವಿರ ರೂ.ಗಳ ಖರ್ಚು ಬರುತ್ತದೆ. ನಾನು ಭಾಡಿಗೆ ಮನೆಯಲ್ಲಿ ಇದ್ದಾಗ ತಿಂಗಳಿಗೆ 2500/- ಗಳ ಭಾಡಿಗೆ ಹಣವನ್ನು ಕೊಡುತ್ತಿದ್ದೇನು. ಈಗ ಒಂದು ತಿಂಗಳಿಂದ ನಾನು ಸ್ವಂತ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ. ನನ್ನ ತಂದೆ ತಾಯಿಗಳ ಉಪಜೀವನಕ್ಕೆ ನಾನು ಪ್ರತಿ ತಿಂಗಳು ಹಣವನ್ನು ನೀಡುವುದಿಲ್ಲ. ನಮ್ಮ ಮನೆತನದ ಹೊಲದ ಉತ್ಪನ್ನವನ್ನು ಅವರೇ ಪಡೆದುಕೊಳ್ಳುತ್ತಾರೆ ನನಗೆ ಕೊಡುವುದಿಲ್ಲ. ನಾನು ಹತ್ತು ಪುಸ್ತಕಗಳನ್ನು ಬರೆದು ಮುದ್ರಣ ಮಾಡಿಸಿರುತ್ತೇನೆ. ಸದರಿ ವಿಷಯವನ್ನು ನನ್ನ ದೂರಿನಲ್ಲಿ ನಮೂದಿಸಿರುವುದಿಲ್ಲ. ಸದರಿ ಪುಸ್ತಕಗಳಿಂದ ನನಗೆ ಉತ್ಪನ್ನ ಬರುತ್ತಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ನನ್ನ ಮತ್ತು ಆರೋಪಿತನ ಮಧ್ಯೆ ವೈಮನಸ್ಸು ಇತ್ತು ಎಂದರೆ ಸರಿ ಅಲ್ಲ. ನನಗೆ ಉಮೇಶ ಮಲ್ಲಾಪೂರ ಪರಿಚಯ ಇರುತ್ತಾರೆ. ಅವರು ಸಹ ನಾನು ಇದ್ದ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ಮತ್ತು ಆರೋಪಿ ನಡುವೆ ವೈ ಮನಸ್ಸು ಬೆಳೆಯಬರದೆನ್ನುವ ಉದ್ದೇಶದಿಂದ ನಮ್ಮ ಮಧ್ಯೆ ಉಮೇಶ ಮಲ್ಲಾಪೂರ ಇವರು ರಾಜಿ ಮಾಡಿಸಿದ್ದರು ಎಂದರೆ ಸರಿ ಅಲ್ಲ.

( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಸಮಯವನ್ನು ನೀಡಲಾಯಿತು)

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

ಜೆಎಂಎಫಸಿ ನ್ಯಾಯಾಧೀಶರು,

ರೋಣ.